# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 21/2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ರಿಜ್ವಾನ ಬೇಗಂ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಫಯಾಜ್ ಅಹಮದ್ | 29.10.2024 | |
| ವಯಸ್ಸು | ಃ 34 ವರ್ಷ | | |
| ವೃತ್ತಿ | ಃ ಗೃಹಿಣಿ | ಪ್ರಾ.ಸಾ. | ಃ 15 |
| ವಾಸಸ್ಥಳ | ಃ ರಾಜೀವನಗರ | ಚಾ.ಸಾ. | ಃ 20 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2013* ರಲ್ಲಿ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಎಸ್.ಬಿ ಅಕೌಂಟ್ ತೆರೆದಿದ್ದೇನೆ. ಆದರೆ ಅಕೌಂಟ್ ನಂಬರ್ ನೆನಪಿಲ್ಲ. *2014* ರಲ್ಲಿ ನಾನು ವೇದಾವತಿ ಎನ್ನುವವರು ಬಳಿ *50* ಸಾವಿರ ಸಾಲವಾಗಿ ಪಡೆದಿದ್ದೆ. ಅದನ್ನು ನನ್ನ ವೈಯಕ್ತಿಕ ಖರ್ಚಿಗೋಸ್ಕರ ಪಡೆದಿದ್ದೆ. ಆ ಕಾಲಕ್ಕೆ ಅವರು ಮಾಸಿಕ ಶೇ.*10* ರಷ್ಟು ಬಡ್ಡಿ ಕೇಳಿದಾಗ ನಾನು ಮಾಸಿಕ ಶೇ.*5* ರಷ್ಟು ಬಡ್ಡಿ ಕೊಡುವುದಾಗಿ ಒಪ್ಪಿ ಎರಡು ಚೆಕ್ ಗಳನ್ನು ಭದ್ರತೆಗಾಗಿ ಕೊಟ್ಟಿದ್ದೆ. ನಂತರ ಆ ಪೈಕಿ ಒಂದು ಚೆಕ್ ನ ಮೂಲಕ ಅವರು *1,34,000/-* ರೂಪಾಯಿಗಳನ್ನು ಪಡೆದಿದ್ದಾರೆ. ಇನ್ನೊಂದು ಚೆಕ್ ಅನ್ನು ಕೊಡಲು ಕೇಳಿದಾಗ ಉಳಿದ ಶೇ.*5* ರಷ್ಟು ಬಡ್ಡಿ ಕೊಟ್ಟರೇ ಮಾತ್ರ ಕೊಡುತ್ತೇನೆ ಎಂದು ಅವರೇ ಇಟ್ಟುಕೊಂಡಿದ್ದರು. ನಂತರ ಮಂಡಿ ಪೋಲೀಸ್ ಠಾಣೆ ಪೋಲೀಸರು ವೇದಾವತಿಯವರ ಮನೆಯಿಂದ ನನ್ನ ಚೆಕ್ ಅನ್ನು ಅಮಾನತ್ತು

ಪಡಿಸಿಕೊಂಡಾಗ ನನ್ನನ್ನು ಪೋಲೀಸ್ ಠಾಣೆಗೆ ಕರೆಸಿ ಆ ಚೆಕ್ ಅನ್ನು ತೋರಿಸಿದ್ದರು ಮತ್ತು ನನ್ನ ಹೇಳಿಕೆ ಪಡೆದಿದ್ದರು. ಈಗ ನಾನು ನೋಡುತ್ತಿರುವ ದಾಖಲೆ ನಾನು ನನ್ನ ಖಾತೆ ತೆರೆಯುವಾಗ ಬ್ಯಾಂಕ್ ಗೆ ಕೊಟ್ಟಿದ್ದ ಅರ್ಜಿಯ ಪ್ರತಿ ಇದೆ. ಸದರಿ ದಾಖಲೆಯನ್ನು ನಿ.ಪಿ-*25* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಚೆಕ್ ನಾನು ವೇದಾವತಿಯವರಿಗೆ ಕೊಟ್ಟಿದ್ದ ಚೆಕ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಚೆಕ್ ಅನ್ನು ನಿ.ಪಿ-*26* ಮತ್ತು ಸಹಿಯನ್ನು ನಿ.ಪಿ-*26*(ಎ) ಎಂದು ಗುರುತಿಸಿದೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*